# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 950 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು) |
| ವಿಷಯ | : | ಬೆಂಗರೆ ಕಸಬಾದಲ್ಲಿ ಗಾಲ್ಫ್‌ಕ್ಲಬ್ ಸ್ಥಾಪಿಸುವ ಬಗ್ಗೆ |
| ಉತ್ತರಿಸುವ ಸಚಿವರು | : | ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು |
| ಉತ್ತರಿಸುವ ದಿನಾಂಕ | : | 17-12-2018 |

| ಕ್ರ. ಸ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗರೆ ಕಸಬಾದಲ್ಲಿ ಗಾಲ್ಫ್‌ಕ್ಲಬ್ ಸ್ಥಾಪಿಸಲು ಉದ್ದೇಶಿಸಿದ್ದು, ಈ ಯೋಜನೆ ಯಾವ ಹಂತದಲ್ಲಿದೆ; CRZ ನಿಯಮದಲ್ಲಿ ಮೀಸಲಾತಿ ಇಡಲಾಗಿದೆಯೇ; ಯೋಜನೆ ಯಾವಾಗ ಪ್ರಾರಂಭಗೊಂಡು ಪೂರ್ಣಗೊಳ್ಳುವುದು; (ವಿವರ ಒದಗಿಸುವುದು) | ಬೆಂಗರೆ ಕಸಬಾದಲ್ಲಿ ಗಾಲ್ಫ್‌ಕ್ಲಬ್ ಸ್ಥಾಪಿಸುವ ಯೋಜನೆಯ ಬಿಡ್ಡುದಾರ ಸಂಸ್ಥೆಯಾದ M/s Opus Hotels & Resorts Pvt. Ltd. Consortium of M/s. Opus Hotels & Resorts Pvt. Ltd. and M/s Laguna National Golf & Country Club Ltd. Bangalore ರವರು ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಯಿಂದ CRZ ಕ್ಲಿಯರೆನ್ಸ್ ಪಡೆದು ಸಲ್ಲಿಸಬೇಕಾಗಿರುತ್ತದೆ. ಸದರಿ ಕ್ಲಿಯರೆನ್ಸ್ ಪಡೆದು ಸಲ್ಲಿಸಿದ ನಂತರ ಎರಡನೇ ಕಂತಿನ ಲ್ಯಾಂಡ್ ಪ್ರೀಮಿಯಂ ಮೊತ್ತ ಪಾವತಿಸಿದ ಮೇಲೆ ಜಮೀನನ್ನು ಬಿಡ್ಡುದಾರ ಸಂಸ್ಥೆಗೆ ಒಪ್ಪಂದ ಮಾಡಿಕೊಂಡು ವಹಿಸಿಕೊಡಲಾಗುವುದು. ಜಮೀನನ್ನು ಹಸ್ತಾಂತರ ಮಾಡಿದ ಮೇಲೆ ಯೋಜನೆಯ ಕಾಮಗಾರಿಯನ್ನು ಬಿಡ್ಡುದಾರ ಸಂಸ್ಥೆ ಪ್ರಾರಂಭಿಸಿ ಒಂದು ವರ್ಷದ ಒಳಗೆ ಪೂರ್ಣಗೊಳಿಸಿ ಯೋಜನೆ ಪ್ರಾರಂಭಿಸಬೇಕಾಗಿರುತ್ತದೆ. |
| (ಆ) | ಈ ಯೋಜನೆಯ ಕಾರ್ಯಗತಗೊಳಿಸಲು ವಿಫಲವಾಗಿರುವ ಕಾರಣಗಳೇನು; ಸರಕಾರಕ್ಕೆ ಈ ಯೋಜನೆ ಮುಖಾಂತರ ಎಷ್ಟು ಹಣ ತುಂಬಲಾಗಿದೆ; ಎಷ್ಟು ಎಕರೆ ಭೂಮಿ ಮೀಸಲಿಡಲಾಗಿದೆ; (ವಿವರ ಒದಗಿಸುವುದು) | ಯೋಜನೆಯು ವಿಫಲವಾಗಿರುವುದಿಲ್ಲ. ಈ ಯೋಜನೆಗೆ ಸಂಬಂಧಿಸಿದಂತೆ ಬಿಡ್ಡುದಾರ ಸಂಸ್ಥೆಯು ಸರ್ಕಾರಕ್ಕೆ ಸೇವಾ ತೆರಿಗೆ ಹಾಗೂ ಇತರೆ ತೆರಿಗೆಗಳು ಸೇರಿದಂತೆ ಒಟ್ಟಾರೆ ರೂ.1,12,36,000/- ಗಳನ್ನು ಪಾವತಿಸಿರುತ್ತದೆ. ಈ ಯೋಜನೆಗಾಗಿ 135 ಎಕರೆಯನ್ನು ಕಾಯ್ದಿರಿಸಲಾಗಿದೆ (ಗಾಲ್ಫ್ ಕ್ಲಬ್ - 10 ಎಕರೆ ಹಾಗೂ ಗಾಲ್ಫ್ ಕೋರ್ಸ್ - 125 ಎಕರೆ) |
| (ಇ) | ಈ ಯೋಜನೆ ಕಾರ್ಯಗತಗೊಳಿಸದೇ ಸರ್ಕಾರಿ ಭೂಮಿಯನ್ನು ದುರುಪಯೋಗಿಸಿಕೊಂಡು ಅಧಿಕಾರಿಗಳು ನಿರ್ಲಕ್ಷಿಸುತ್ತಿದ್ದಾರೆ ಎಂದ ಆರೋಪವಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ? (ವಿವರ ಒದಗಿಸುವುದು) | ಇಲ್ಲ. |

ಪ್ರಇ 150 ಪ್ರವಾವಿ 2018

(ಸಾ.ರಾ.ಮಹೇಶ್)

ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು